# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

## ಎಸ್ ಸಿ ಕೇಸ್ ನಂ.54/2020

ಚಾ.ಸಾ. 11

ಪ್ರಾ.ಸಾ. 15

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 20.08.2026**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಾಗರ್ |
| ತಂದೆಯ ಹೆಸರು | : | ಕಾಳೇಗೌಡ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ , ಮೈಸೂರು |
| ವಾಸ | : | ನೊದೆಕೊಪ್ಪಲು |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು ಕಳೆದ 10-12 ವರ್ಷಗಳಿಂದ ಮೈಸೂರು ರೈಲ್ವೆ ನಿಲ್ದಾಣದ ಹಿಂಭಾಗದ ಗೇಟ್ ಬಳಿ ಇರುವ ಪಾರ್ಕಿಂಗ್ ಸ್ಥಳದಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ ಈ ಮುಂಚೆ ಯಾರನ್ನೂ ನೋಡಿರುವುದಿಲ್ಲ. ಈಗ ನಾನು ಅಮಾನತು ಮಹಜರ್ ನೋಡುತ್ತಿದ್ದು ಅದನ್ನು ಈಗ ನಿಪಿ.29 ಎಂದು, ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು.

2. ಈಗ 10 ವರ್ಷದ ಹಿಂದೆ ಒಂದು ದಿನ ಯಾವುದೋ ಪೊಲೀಸರು ನಾನು ಕೆಲಸ ಮಾಡುತ್ತಿದ್ದ ಪಾರ್ಕಿಂಗ್ ಸ್ಥಳಕ್ಕೆ ಬಂದು ನಿಪಿ.29 ರ ಮೇಲೆ ಸಹಿ ಪಡೆದಿರುತ್ತಾರೆ. ಆ

ಕಾಲಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿತರು ಇರಲಿಲ್ಲ. ಆ ಕಾಲಕ್ಕೆ ಪೊಲೀಸರು ಯಾವುದೇ ವಾಹನವನ್ನು ಅಮಾನತು ಮಾಡಿಕೊಂಡಿರುವುದಿಲ್ಲ.

3. ಈಗ ನಾನು 3 ಛಾಯಾಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಮ್ಮ ಪಾರ್ಕಿಂಗ್ ಸ್ಥಳದಲ್ಲಿ ತೆಗೆದಿರುತ್ತಾರೆ. ಅವುಗಳನ್ನು ನಿಪಿ.30 ರಿಂದ 32 ಎಂದು ಗುರುತಿಸಲಾಯಿತು. ಅವುಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ನಿಪಿ.30 ಮತ್ತು 31 ರಲ್ಲಿ ಕಾಣಿಸುವ ವಾಹನಗಳನ್ನು ನಮ್ಮ ಪಾರ್ಕಿಂಗ್ ಸ್ಥಳದಿಂದ ಅಮಾನತು ಪಡಿಸಿಕೊಂಡಿರುವುದಿಲ್ಲ. ಈಗ ನಾನು 2 ರಶೀದಿಗಳನ್ನು ನೋಡುತ್ತಿದ್ದು ಅವು ನಮ್ಮ ಪಾರ್ಕಿಂಗ್ ಸ್ಥಳದ ರಶೀದಿಗಳಾಗಿರುತ್ತವೆ. ಅವುಗಳನ್ನು ನಿಪಿ.33 ಮತ್ತು ನಿಪಿ.34 ಎಂದು ಗುರುತಿಸಲಾಯಿತು.

4. ಸದರಿ ರಶೀದಿಗಳನ್ನು ನಮ್ಮ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲ್ಲಿಸುವ ಸಂಬಂಧವಾಗಿ ನೀಡಿರುತ್ತೇನೆ. ನನಗೆ ನಿಪಿ.29 ರಲ್ಲಿ ಬರೆದ ವಿಷಯಗಳು ಗೊತ್ತಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ. ಈ ವಿಚಾರವಲ್ಲದೆ ಬೇರೆ ವಿಚಾರ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

5. ದಿನಾಂಕ 06.07.2019 ರಂದು ಮದ್ದೂರು ಸರ್ಕಲ್ ಇನ್ಸ್ ಪೆಕ್ಟರ್ ಮಹೇಶ್ ಎನ್ನುವವರು ಈಗ ನ್ಯಾಯಾಲಯದ ಮುಂದಿರುವ 1 ರಿಂದ 4 ಆರೋಪಿತರನ್ನು ನಮ್ಮ ಪಾರ್ಕಿಂಗ್ ಸ್ಥಳಕ್ಕೆ ಕರೆದುಕೊಂಡು ಬಂದಿದ್ದು ಸದರಿಯವರನ್ನು ನಮಗೆ ತೋರಿಸಿ ಅವರುಗಳು ನಿಮ್ಮ ಪಾರ್ಕಿಂಗ್ ಸ್ಥಳದಲ್ಲಿ ಎರಡು ವಾಹನಗಳನ್ನು ನಿಲ್ಲಿಸಿದ್ದು ಅವುಗಳನ್ನು ಈ

ಪ್ರಕರಣದ ಕೃತ್ಯ ಎಸಗಿದ ನಂತರ ಪರಾರಿಯಾಗಲು ಬಳಸಿದ್ದಾಗಿ ನಂತರ ನಮ್ಮ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದಾಗಿ ತಿಳಿಸಿದರು ಎಂದರೆ ಸರಿಯಲ್ಲ.

6. ಆ ಸಮಯದಲ್ಲಿ ಆರೋಪಿ 1 ರಿಂದ 3 ರವರು ನಮ್ಮ ಪಾರ್ಕಿಂಗ್ ಸ್ಥಳದಲ್ಲಿ ಇರುವ ಎಲ್ಲಾ ಬೈಕ್ ಗಳ ಮಧ್ಯದಲ್ಲಿ ಇದ್ದ ಒಂದು ಪಲ್ಸರ್ ಮೋಟಾರ್ ಬೈಕ್ ತೋರಿಸಿದ್ದು ಅದರ ಸಂಖ್ಯೆ ಗಮನಿಸಿದಾಗ ಅದು KA-11-EK4104 ಆಗಿದ್ದು ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ ಟ್ಯಾಂಕ್ ಕವರ್ ಒಳಗಡೆ ಎರಡು ಕೀಗಳು ಇದ್ದವು ಎಂದರೆ ಸರಿಯಲ್ಲ. ಸದರಿ ಕೀಗಳ ಬಗ್ಗೆ ವಿಚಾರ ಮಾಡಿದಾಗ ಒಂದು ಕೀ ಮೇಲ್ಕಂಡ ವಾಹನಕ್ಕೆ ಸಂಬಂಧಪಟ್ಟಿದ್ದು ಮತ್ತು ಇನ್ನೊಂದು ಕೀ DEO ಮೋಟಾರ್ ಸೈಕಲ್ ಗೆ ಸಂಬಂಧಪಟ್ಟದ್ದು ಇರುತ್ತದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ.

7. ನಂತರ ನ್ಯಾಯಾಲಯದ ಮುಂದಿರುವ 4 ನೇ ಆರೋಪಿ ವಿಕಾಸ್ ಅಲಿಯಾಸ್ ವಿಕ್ಕಿ ಈತನು ಸದರಿ ಸ್ಥಳದಿಂದ ಸುಮಾರು 50 ಅಡಿ ದೂರದಲ್ಲಿ ಒಂದು ಡಿಯೋ ಸ್ಕೂಟರ್ ಅನ್ನು ತೋರಿಸಿ ಸದರಿ ಸ್ಕೂಟರ್ ನಲ್ಲಿ ಕೃತ್ಯ ಎಸಗಿದ ನಂತರ ಸದರಿ ವಾಹನವನ್ನು ತಂದು ಅಲ್ಲಿ ನಿಲ್ಲಿಸಿದ್ದಾಗಿ ಹೇಳಿದ್ದರ ಮೇರೆಗೆ ಸದರಿ ಸ್ಕೂಟರ್ ಅನ್ನು ಗಮನಿಸಿದಾಗ ಹಿಂಭಾಗ ಮತ್ತು ಮುಂಭಾಗ ಯಾವುದೇ ನಂಬರ್ ಪ್ಲೇಟ್ ಇರುವುದಿಲ್ಲ ಹಾಗೂ ಆ ಸಮಯದಲ್ಲಿ 4 ನೇ ಆರೋಪಿಯು ವಾಹನದ ಹಿಂಭಾಗದ ನಂಬರ್ ಪ್ಲೇಟು ವಾಹನದ ಡಿಕ್ಕಿ ಒಳಗಡೆ ಇರುತ್ತದೆ ಮತ್ತು ಸ್ಕೂಟರ್ ಸ್ಟ್ಯಾಂಡಿನವರು ನೀಡಿರುವ ರಶೀದಿಗಳು ಕೂಡ ಸದರಿ ಡಿಕ್ಕಿಯಲ್ಲಿ ಇರುವುದಾಗಿ ತಿಳಿಸಿದ್ದರ ಮೇರೆಗೆ ಈ ಹಿಂದೆ ಪಲ್ಸರ್ ಬೈಕಿನಲ್ಲಿ ಟ್ಯಾಂಕ್ ಕವರ್ ನಲ್ಲಿ ಇದ್ದ 2 ಕೀಗಳ ಪೈಕಿ ಒಂದು ಕೀ ನಿಂದ ಸದರಿ ಡಿಕ್ಕಿಯನ್ನು ತೆರೆದು ನೋಡಿದರು ಎಂದರೆ ಸರಿಯಲ್ಲ.

8. ಹಾಗೆ ತೆರೆದು ನೋಡಿದಾಗ ಸದರಿ ಡಿಕ್ಕಿಯಲ್ಲಿ KA-01-JB-1273 ಎನ್ನುವ ನಂಬರ್ ಪ್ಲೇಟ್ ಇತ್ತು ಎಂದರೆ ಸರಿಯಲ್ಲ. ಆಗ 4 ನೇ ಆರೋಪಿಯು ಅದೇ ನಂಬರ್ ಪ್ಲೇಟು ಸದರಿ ವಾಹನದ್ದು ಎಂದು ತಿಳಿಸಿದನು ಎಂದರೆ ಸರಿಯಲ್ಲ. ನಂತರ ಡಿಕ್ಕಿ ಒಳಗಡೆ ಈಗ ತೋರಿಸಲಾದ ನಿಪಿ.33 ಮತ್ತು 34 ರಶೀದಿಗಳು ಇದ್ದು ಅವುಗಳು ಸದರಿ

ವಾಹನಗಳನ್ನು ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ ಬಗ್ಗೆ ನೀಡಿದ ರಶೀದಿಗಳಾಗಿರುತ್ತವೆ ಎಂದು ಹೇಳಿದ ಎಂದರೆ ಸರಿಯಲ್ಲ.

9. ಪೊಲೀಸರು ನಿಪಿ.30 ಮತ್ತು 31 ರಲ್ಲಿ ಕಾಣುತ್ತಿರುವ ಮೇಲ್ಕಂಡ ವಾಹನಗಳನ್ನು ಮತ್ತು ಒಂದು ನಂಬರ್ ಪ್ಲೇಟನ್ನು ಹಾಗೂ ಎರಡು ರಶೀದಿಗಳನ್ನು ಬೆಳಗ್ಗೆ 11.30 ರಿಂದ 12.30 ರವರೆಗೆ ನಮ್ಮಗಳ ಸಮಕ್ಷಮ ನಮ್ಮ ಪಾರ್ಕಿಂಗ್ ಸ್ಥಳದಲ್ಲಿ ನಿಪಿ.29 ರಂತೆ ಮಹಜರ್ ಮಾಡಿಕೊಂಡು, ಆ ಕಾಲಕ್ಕೆ ಪಂಚರಾದ ಚಾಸಾ.21 ಮತ್ತು 22 ರವರನ್ನು ಹಾಜರು ಪಡಿಸಿಕೊಂಡು ಮಹಜರ್ ಪ್ರಕ್ರಿಯೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ.30 ರಿಂದ 32 ರಂತೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

10. ಆರೋಪಿ ನಂ.1 ರಿಂದ 4 ರವರು ನಮ್ಮ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿ ಹೋಗಿದ್ದ ವಾಹನಗಳನ್ನು ನಮ್ಮ ಪಾರ್ಕಿಂಗ್ ಸ್ಥಳದಲ್ಲಿ ತೋರಿಸಿ ಪೊಲೀಸರು ಅಮಾನತು ಪಡಿಸಿಕೊಂಡಾಗ ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ.29 ಕ್ಕೆ ಸಹಿ ಮಾಡಿದ್ದರೂ ಸಹಿತ ಈಗ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ನಿಪಿ.35 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಇದೇ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಎಸ್.ಸಿ.83/2021 ಪ್ರಕರಣ ದಾಖಲಾಗಿದ್ದು ಅದರಲ್ಲಿ 4 ನೇ ಆರೋಪಿ ಇರುತ್ತೇನೆ ಎಂದರೆ ನಿಜ.

**<u>ಮರು ವಿಚಾರಣೆಃ</u>** ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ.

**(ಮಧ್ವೇಶ ಡಬೇರ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.